# ಗುತ್ತು ಮನೆಯ ಸಂಸ್ಕೃತಿ

ದಕ್ಷಿಣ ಕನ್ನಡ ತನ್ನದೇ ಆದ ಪ್ರಾಚೀನ ಸಂಸ್ಕೃತಿಯನ್ನು ಹೊಂದಿದ ಪ್ರದೇಶ. ತುಳು ಮಾತನಾಡುವ ಇಲ್ಲಿಯ ಜನರು ತಮ್ಮದೇ ಆದ ಆಚಾರ–ವಿಚಾರಗಳನ್ನು ಅನುಸರಿಸಿಕೊಂಡು ಬಂದಿದ್ದಾರೆ. ಇಂಥ ತುಳು ಸಂಸ್ಕೃತಿಯನ್ನು ಮಂಗಳೂರಿನ ಪಿಲಿಕುಳ ನಿಸರ್ಗಧಾಮದಲ್ಲಿ ಇರುವ ಗುತ್ತು ಮನೆಯಲ್ಲಿ ಪರಿಚಯಿಸುವ ಯತ್ನ ಮಾಡಲಾಗಿದೆ.

ಗುತ್ತು ಮನೆಯಲ್ಲಿ ತುಳು ನಾಡಿನ ಸಂಸ್ಕೃತಿ ಬಿಂಬಿಸುವ ಯಕ್ಷಗಾನದ ಪರಿಕರಗಳು, ದೈವಗಳ ಮುಖವಾಡಗಳು, ಅಡುಗೆ ಮನೆಯಲ್ಲಿ ಬಳಕೆ ಆಗುತ್ತಿದ್ದ ವಸ್ತುಗಳನ್ನು ಅನಾವರಣ ಮಾಡಲಾಗಿದೆ. ಊರಿನ ಪ್ರಮುಖರಾದ ಗುತ್ತು ಮನೆಯ ಯಜಮಾನರ ಬಳಕೆಯ ವಸ್ತುಗಳನ್ನು ಇಡಲಾಗಿದೆ. ತಾಳಿ ಬೆಲ್ಲದ ಮಾಹಿತಿಯನ್ನೂ ಇಲ್ಲಿ ನೀಡಲಾಗಿದೆ. ತುಳು ಸಂಸ್ಕೃತಿ ತಿಳಿಯಲು ಇದೂ ನೆರವು ನೀಡುತ್ತದೆ.

–ಅರುಣ್ ಕಿಲ್ಲೂರು



# ಎಲೆ ತಿನ್ನುವ ಹುಳ

ಈ ಜಗತ್ತೇ ವಿಸ್ಮಯಗಳ ಆಗರ. ಎಷ್ಟೋ ವಿಧದ ಜೀವ ಜಂತುಗಳು ಸುಂದರವಾಗಿರುತ್ತವೆ, ಕೆಲವು ತಮ್ಮ ಗುಣ– ಲಕ್ಷಣದಿಂದ ವೀಕ್ಷಕರನ್ನು ಆಕರ್ಷಿಸುತ್ತವೆ. ಎಂದೂ ಕಂಡಿರಲಾರದ ಸೃಷ್ಟಿ ವಿಸ್ಮಯ ಬೆರಗನ್ನು ಹುಟ್ಟಿಸುತ್ತದೆ.

ಸಾಮಾನ್ಯವಾಗಿ ಕರಿಬೇವು, ದಾಸವಾಳದ ಎಲೆಗಳನ್ನು ತಿನ್ನುವ ಬೆರಳು ಗಾತ್ರದ ಹಸಿರು ಬಣ್ಣದ ಹುಳಗಳನ್ನು ಎಲ್ಲರೂ ನೋಡಿರುತ್ತಾರೆ. ಆದರೆ ನಮ್ಮ ಮನೆಯ ಪಾರಿಜಾತದ ಗಿಡದಲ್ಲಿ ಎಲೆಗಳನ್ನು ತಿನ್ನುತ್ತಿದ್ದ ವಿಚಿತ್ರ ಬಣ್ಣದ ಈ ಜೀವಿ ಅಚ್ಚರಿ ಮೂಡಿಸಿತು. ಕಂದು, ಹಳದಿ ಬಣ್ಣ, ಒಂದು ಸಣ್ಣ ಬಾಲ, ಹೆಡೆಯ ಆಕಾರದಲ್ಲಿದ್ದ ತಲೆ ಇದರ ಈ ವಿಚಿತ್ರ ರೂಪ ಫೋಟೊ ಕ್ಲಿಕ್ಕಿಸಲು ಪ್ರೇರೇಪಿಸಿತು.

–ಪುಷ್ಪಾ ಎನ್.ಕೆ. ರಾವ್



# ಅಪರೂಪದ ಶಿಲ್ಪಕಲಾಕೃತಿಗಳು

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಅರಳಿ ನಿಂತ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿ. ಏಕ ಶಿಲ್ಪಕಲಾ ಕೌಶಲ್ಯದ ಕೃತಿ. ಬುದ್ಧ, ರಾಜಾರಾಂ ಮೋಹನ ರಾಯ್, ಕುವೆಂಪು ಸೇರಿದಂತೆ ಇಂತಹ ಅನೇಕ ಆಕರ್ಷಕ ಕಾಲಕೃತಿಗಳು ಅಲ್ಲಿವೆ.

ಅದು ಎಲ್ಲೆಂದರೆ ಮಾನಸ ಗಂಗೋತ್ರಿಯ 'ಡಾ. ಬಾಬು ಜಗಜೀವನ ರಾಮ್ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ'ಯ ಸುಂದರ ಪರಿಸರದ ಆವರಣದಲ್ಲಿ ನೀವೂ ನೋಡಬಹುದು. ಮೈಸೂರಿನ ಸೌಂದರ್ಯಕ್ಕೆ ಮತ್ತೊಂದು ಗರಿಮೆ ಎಂಬಂತೆ ಈ ಕಲಾಕೃತಿಗಳು ಗೋಚರಿಸುತ್ತವೆ.

–ಆರ್. ವೀರೇಶ್ ಕುಮಾರ್, ಬೆಂಗಳೂರು

